**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಿ.ಸಿ.ನಂ.56/2013

ಪಿಡಬ್ಲ್ಯೂ -10

ಸಾಕ್ಷಿದಾರನ ಹೆಸರುಃ- ಬಿ. ಎಂ. ಶ್ರೀನಿವಾಸ
ತಂದೆ ಹೆಸರು :- ಮೂಡಲಗಿರಯ್ಯ
ವಯಸ್ಸು :- 53 ವರ್ಷ
ಉದ್ಯೋಗ :- ಹೆಚ್ ಸಿ
ವಾಸ :- ಹು.ದುರ್ಗ

**ಸಾಕ್ಷಿಗೆ ದಿಃ13.07.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಕಲಂ 299 ಅಡಿಯಲ್ಲಿ ಸಾಕ್ಷಿಯ ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ2021 ರಿಂದ ಇಲ್ಲಿಯವರೆವಿಗೂ ನಾನು ಹುಲಿಯುರುದುರ್ಗ ಠಾಣೆಯಲ್ಲಿ ಹೆಚ್ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದೇನೆ.

ದಿಃ15.06.2026 ರಂದು ಈ ನ್ಯಾಯಾಲಯದಿಂದ ಸಿಸಿ ನಂ.56/2013 ಪ್ರಕರಣದಲ್ಲಿ ಆರೋಪಿ ನಾಗಮ್ಮ ವಯಸ್ಸು 50 ವರ್ಷ, ವಳಗೆರೆ ಪುರ ಗ್ರಾಮ, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು ಇವರ ವಿರುದ್ದ ಉದ್ಗೋಷಣೆ ವಾರೆಂಟನ್ನು ಹೊರಡಿಸಿದ್ದು ಈ ಸಂಬಂಧ ದಿಃ07.07.2026 ರಂದು ಆರೋಪಿಯ ವಿಳಾಸಕ್ಕೆ ಹೋಗಿ ವಿಚಾರ ಮಾಡಲಾಗಿ ಆರೋಪಿಯ ಪತ್ತೆಯ ಬಗ್ಗೆ ಸರಿಯಾದ ಮಾಹಿತಿ ಸಿಕ್ಕಿರುವುದಿಲ್ಲ. ವಳಗೆರೆ ಪುರ ಗ್ರಾಮದ ಗಂಗೆಗೌಡ ಮತ್ತು ಚನ್ನಪ್ಪ ರವರ ಸಮಕ್ಷಮ ಮದ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ಸ್ಥಳದಲ್ಲಿ ಮಹಜರ್ ಕ್ರಮಜರುಗಿಸಿರುತ್ತೇನೆ. ಅದೇ ದಿನ ಗ್ರಾಮದ ಸಾರ್ವಜನಿಕ ಸ್ಥಳಗಳಲ್ಲಿ ಆರೊಪಿಯ ಉದ್ಘೋಷಣಾ ನಕಲು ಪ್ರತಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸಿರುತ್ತೇನೆ. ಆರೋಪಿಯ ಪತ್ತೆಗೆ ಸಹಕರಿಸುವಂತೆ ಟಾಂ ಟಾಂ ಹೊಡೆಸಿರುತ್ತೇನೆ. ಆರೋಪಿ ವಿರುದ್ದ ಉದ್ಘೋಷಣಾ ಪಂಚನಾಮೆಯನ್ನು ದಿನಾಂಕ 13.07.2026 ರಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನಿ.ಪಿ 15 ಎಂದು ಸಹಿ ನಿ.ಪಿ 15(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.